1992-93ಸಾಲಿನ ಮಂಜೂರಾದ ವಸತಿ ಸೌಲಭ್ಯ

730- ಶ್ರೀ ಮಂಜುನಾಥ್ ಪಿ. ಕುನ್ನೂರ (ಶಿಗ್ಗಾಂವ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ ಎಷ್ಟು ಜನರಿಗೆ ವಸತಿ ವ್ಯವಸ್ಥೆ ಮಾಡಲಾಗಿದೆ?*

ಆ) *ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಶ್ರಿ ಗೋಪಿನಾಥ್ ಸಾಂಡ್ರ(ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿ 1992-93ನೇ ಸಾಲಿನಲ್ಲಿ ರಾಜ್ಯದಲ್ಲಿ ನವೆಂಬರ್ ಅಂತ್ಯದವರೆಗೆ 3644 ಮನೆಗಳನ್ನು ನಿರ್ಮಿಸಿದೆ.

ಆ) 28.03 ಕೋಟಿ ರೂ.ಗಳು.

ವರದಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ

731- ಶ್ರೀ ಮಂಜುನಾಥ ಪಿ. ಕುನ್ನೂರ (ಶಿಗ್ಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವರದಾ ನದಿಯಿಂದ ಸವಣೂರು, ಶಿಗ್ಗಾಂವ್ ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆ ಎಂದು ಮಂಜೂರಾಗಿದೆ.*

ಆ) *ಸದರಿ ಯೋಜನೆಯನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭಿಸಲಾಗುವುದು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಆದೇಶ ಸಂ: ಹೆಚ್‌ಯುಡಿ:61:ಯುಡಬ್ಲ್ಯುಎಸ್: 91,ದಿನಾಂಕ:9Ë10Ë91ರಂದು ಮಂಜೂರಾಗಿದೆ.

ಆ) ನಾಗನೂರು ಕೆರೆಯ ಅಭಿವೃದ್ಧಿ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣನಿಗಮ ಇವರಿಗೆ ವಹಿಸಿಕೊಡಲಾಗಿದೆ. ಶಿಗ್ಗಾಂವ್ ಬಳಿಯ ನಾಗನೂರು ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ಜಲ ಮಂಡಳಿಗೆ ಹಸ್ತಾಂತರಗೊಂಡಿಲ್ಲ ದಿರುವುದರಿಂದ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. ಉಳಿದ ಕೆಲಸಗಳಿಗೆ ಟೆಂಡರ್‌ಗಳನ್ನು ಇನ್ನು ಒಂದು ತಿಂಗಳಲ್ಲಿ ಕರೆದು, ಕೆಲಸಗಳನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು, ನಂತರ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಅಂಗವಿಕಲರಿಗೆ ಮಾಸಾಶನ

852-ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರವು ಅಂಗವಿಕಲರಿಗೆ ಮಾಸಿಕ ಭತ್ಯೆಯನ್ನು ಕೊಡುತ್ತಿದೆಯೇ?*

ಆ) *ಹಾಗಿದ್ದಲ್ಲಿ ಅಂಗವಿಕಲರಿಗೆ ಹಾಲಿ ಕೊಡುತ್ತಿರುವ ಮಾಸಿಕ ಭತ್ಯೆ ಎಷ್ಟು?*

ಇ) *ಈವರೆಗೆ ಎಷ್ಟು ಫಲಾನುಭವಿಗಳಿಗೆ ಮಾಸಿಕ ಭತ್ಯೆಯನ್ನು ಮಂಜೂರು ಮಾಡಲಾಗಿದೆ?*

(ಜಿಲ್ಲಾವಾರು ವಿವರಗಳನ್ನು ಕೊಡುವುದು)